2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 144/2023</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಬಸವರಾಜು | ಪಿಡಬ್ಲೂ - 07 |
| ತಂದೆಯ ಹೆಸರು | - | ತಿಮ್ಮಾಬೋವಿ | ಸಿಡಬ್ಲೂ - 27 |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಚಿಕ್ಕಾಲಕಟ್ಟೆ ಗಾಮ, ಕಡೂರು ತಾಲ್ಲೂಕು | |

ದಿನಾಂಕಃ **19.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಆರೋಪಿತರು ಮತ್ತು ಪಿರ್ಯಾದಿ ಸಗಣಿಬಸವನಹಳ್ಳಿ ಊರಿನವರು. ಚಾಸಾ.1 ನನ್ನ ಅತ್ತಿಗೆ. ಮೃತ ಭಾರತಿ ಚಾಸಾ.1 ರವರ ಮಗಳು. ಚಾಸಾ.1 ರವರಿಗೆ ಒಟ್ಟು ಮೂವರು ಮಕ್ಕಳು. ಮೃತಳು ಮೊದಲನೆಯವಳು.

2. ಕಳೆದ ಸುಮಾರು ಎರಡೂವರೆ ವರ್ಷಗಳ ಹಿಂದೆ ಭಾರತಿ ಕೊಲೆಯಾಗಿದ್ದಾಳೆ. ಭಾರತಿ ಕೊಲೆಯಾದಾಗ ನಾನು ನಮ್ಮ ಊರಿನಲ್ಲಿದ್ದೆ. ಅವಳು ಕೊಲೆಯಾದ ದಿನ ಬೆಳಿಗ್ಗೆ ಸಗಣಿಬಸವನಹಳ್ಳಿ ಗ್ರಾಮದ ಯಾರೋ ಕರೆ ಮಾಡಿ ಚಾಸಾ.1 ರವರ ಮಗಳು ಆರೋಪಿತರ ಮನೆಯ ಹಿಂಬದಿ ಕೊಲೆಯಾಗಿದ್ದಾಳೆ ತಿಳಿಸಿದರು.

3. ನಾನು ಬೆಳಿಗ್ಗೆ 8.00 ಗಂಟೆ ಸಮಯಕ್ಕೆ ಕೊಲೆಯಾದ ಸ್ಥಳಕ್ಕೆ ತಲುಪಿದೆ. 2 ನೇ ಆರೋಪಿ ಆತನ ಮನೆಯಲ್ಲಿದ್ದ. ಬೇರೆ ಯಾರು ಮನೆಯಲ್ಲಿರಲಿಲ್ಲ. ಆರೋಪಿತರ ಮನೆಯ ಹಿಂಭಾಗದಲ್ಲಿ ಆರೋಪಿತರ ಹೊಲದಲ್ಲಿ ಭಾರತಿಯ ಶವ ಇತ್ತು. ನಾನು ಬೇಟಿ ನೀಡಿದಾಗ ಜನರು ಯಾರು ಇರಲಿಲ್ಲ. ಆನಂತರ ಗ್ರಾಮಸ್ಥರು ಸೇರಿದರು. ನಾನು ಈ ವಿಚಾರವನ್ನು ಚಾಸಾ.1 ಹಾಗೂ ಅವಳ ಗಂಡನಿಗೆ ಕರೆ ಮಾಡಿ ತಿಳಿಸಿದೆ.

4. ಚಾಸಾ.1 ರವರು ಯಾವುದೋ ಖಾಸಗಿ ವಾಹನದಲ್ಲಿ ಬೆಳಿಗ್ಗೆ ಸುಮಾರು 9.30 ಗಂಟೆಗೆ ಸ್ಥಳಕ್ಕೆ ಬಂದರು. ಮೃತಳ ಶವ ನಾನು ನೋಡಿದಾಗ ಮಕಾಡೆ ಬಿದ್ದಿದ್ದು ಕೈ ಹಿಂಬದಿಗೆ ಇತ್ತು. ಚಾಸಾ.1 ರವರು ಗ್ರಾಮಸ್ಥರನ್ನು ವಿಚಾರಿಸಿ ಒಬ್ಬ ಸುರೇಶ್ ಎನ್ನುವನಿಂದ ದೂರು ಬರೆಸಿದರು.

5. ಬೆಳಿಗ್ಗೆ 10.00 ಗಂಟೆ ಸಮಯಕ್ಕೆ ನಾನು, ಸುರೇಶ ಮತ್ತು ಚಾಸಾ.1 ಸೇರಿ ಠಾಣೆಗೆ ಹೋದೆವು. ಠಾಣೆಯಲ್ಲಿ 1 ನೇ ಆರೋಪಿ ಹಾಜರಿದ್ದಳು. ದೂರು ಸಲ್ಲಿಸಿ ಚಾಸಾ.1 ರವರ ಮನೆಗೆ ಬಂದೆನು. ನಂತರ ಪೋಲೀಸರು ಸ್ಥಳಕ್ಕೆ ಬಂದು ಮಹಜರು ಕ್ರಮ ಜರುಗಿಸಿದರು.

6. ಮೃತ ಭಾರತಿ 5 ನೇ ತರಗತಿವರೆಗೆ ಓದಿದ್ದಳು. ಅವಳು ಚಾಸಾ.1 ರವರ ಮನೆಯಲ್ಲಿ ವಾಸವಿದ್ದಳು. ಆರೋಪಿತರ ಮನೆ ಚಾಸಾ.1 ರವರ ಮನೆಯ ಎದುರುಗಡೆ ಇದೆ. ಈ ಘಟನೆ ನಡೆಯುವ ಎರಡೂವರೆ ವರ್ಷದ ಮೊದಲು ಭಾರತಿ ಒಮ್ಮೆ ನಾಪತ್ತೆಯಾಗಿದ್ದಳು. ಈ ಬಗ್ಗೆ ಚಾಸಾ.1 ರವರು ಸಖರಾಯಪಟ್ಟಣ ಠಾಣೆಯಲ್ಲಿ ದೂರು ನೀಡಿದ್ದರು. 12-13 ದಿನಗಳ ನಂತರ ಭಾರತಿ ಹಾಗೂ 2 ನೇ ಆರೋಪಿ ಮೂಡಿಗೆರೆಯಲ್ಲಿ ಪತ್ತೆಯಾಗಿದ್ದಾರೆ ಎಂದು ಸಖರಾಯಪಟ್ಟಣ ಪೋಲೀಸರು ಠಾಣೆಗೆ ಕರೆತಂದಿದ್ದರು.

7. ಆಗ ನಾನು ಮತ್ತು ಚಾಸಾ.1 ಹಾಗೂ ಗ್ರಾಮಸ್ಥರು ಠಾಣೆಗೆ ಹೋಗಿದ್ದೆವು. 2 ನೇ ಆರೋಪಿ ಹಾಗೂ ಮೃತಳು ಪ್ರೇಮಿಸಿ ಮನೆಬಿಟ್ಟು ಹೋಗಿದ್ದರು ಎಂದು ತಿಳಿಯಿತು. ಭಾರತಿ ಅವಳ ತಾಯಿಯೊಂದಿಗೆ ಹೋದಳು, 2 ನೇ ಆರೋಪಿ ಅವನ ಮನೆಗೆ ಹೋದನು. ಇದಾದ 20 ದಿನಗಳ ನಂತರ ಭಾರತಿ ಹಾಗೂ 2 ನೇ ಆರೋಪಿ ಮತ್ತೊಮ್ಮೆ ಕಾಣೆಯಾದರು.

8. ನಂತರ ಭಾರತಿ ಹಾಗೂ 2 ನೇ ಆರೋಪಿ ಮದುವೆಯಾಗಿದ್ದಾರೆ ಎಂದು ಕೇಳಿದ್ದೇವೆ. ಭಾರತಿ ಮತ್ತು 2 ನೇ ಆರೋಪಿ ಸ್ವಲ್ಪ ದಿನ ಮೂಡಿಗೆರೆ ಕಡೆಯ ಯಾವುದೋ ಎಸ್ಟೇಟಿನಲ್ಲಿ ಉಳಿದು ನಂತರ ಅವರು 2 ನೇ ಆರೋಪಿ ಮನೆಗೆ ಬಂದು ವಾಸವಿದ್ದರು. 1 ನೇ ಆರೋಪಿ ಹಾಗೂ ಅವರ ಮಕ್ಕಳು ಕೂಡ ಅವರ ಜೊತೆಗೆ ವಾಸವಿದ್ದರು. ನನಗೆ ಗೊತ್ತಿರುವಂತೆ ಅವರೆಲ್ಲರೂ ಚೆನ್ನಾಗಿದ್ದರು.

9. ಆರೋಪಿತರ ಊರಿನಲ್ಲಿ ಒಂದು ಜಾತ್ರೆ ಇತ್ತು. ಜಾತ್ರೆಯ ದಿನ ರಾತ್ರಿ ಮೇಲೆ ಹೇಳಿದ ಘಟನೆ ನಡೆದಿದೆ ಎಂದು ಯಾರೋ ಊರಿನವರು ನನಗೆ ಕರೆ ಮಾಡಿದ್ದರು. 2 ನೇ ಆರೋಪಿ ಹಾಗೂ ಮೃತಳು ಜೊತೆ ಯಲ್ಲಿರುವುದು 1 ನೇ ಆರೋಪಿಗೆ ಇಷ್ಟವಿರಲಿಲ್ಲ. ಆರೋಪಿತರು ಮೃತಳನ್ನು ಕೊಲೆ ಮಾಡಿದ್ದಾರೆಂದು ಮತ್ತು 1 ನೇ ಆರೋಪಿ ಠಾಣೆಗೆ ಶರಣಾಗಿದ್ದಳು ಎಂದು ನಂತರ ತಿಳಿಯಿತು. ಘಟನಾ ಸ್ಥಳದ ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.3 ರಿಂದ 9 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು: ಶ್ರೀ.ಎಸ್.ಸಿ.ಎನ್., ವಕೀಲರಿಂದ ಆರೋಪಿತರ ಪರವಾಗಿಃ</u>

10. ಚಾಸಾ.1 ನನ್ನ ಹೆಂಡತಿಯ ಅಕ್ಕ. ನಾನು ಚಿಕ್ಕಾಲಕಟ್ಟೆ ಗ್ರಾಮದ ನಿವಾಸಿ. ಅಲ್ಲಿ ನಮ್ಮ ಕುಟುಂಬದೊಂದಿಗೆ ವಾಸವಿದ್ದೇನೆ. ಚಾಸಾ.1 ರವರ ವಾಸದ ಮನೆ ಸಗಣಿಬಸವನಹಳ್ಳಿ ಗ್ರಾಮದಲ್ಲಿದ್ದು ನಮ್ಮ ಊರಿನಿಂದ 5-6 ಕಿಮೀ ದೂರದಲ್ಲಿದೆ. ನಮ್ಮೂರಿನಿಂದ ಚಾಸಾ.1 ರವರ ಊರಿಗೆ ಹೋಗುವ ರಸ್ತೆ ಮಣ್ಣು ರಸ್ತೆಯಾಗಿದ್ದು ಚೆನ್ನಾಗಿಲ್ಲ. ಚಿಕ್ಕಾಲಕಟ್ಟೆ ಗ್ರಾಮದಿಂದ ಸಗಣಿಬಸವನಹಳ್ಳಿ ಗ್ರಾಮಕ್ಕೆ ಬೈಕಿನಲ್ಲಿ 15 ನಿಮಿಷದಲ್ಲಿ ಹೋಗಬಹುದು.

11. ಯಾರು ಯಾವ ಮೊಬೈಲ್ ನಂಬರಿನಿಂದ ನನಗೆ ಕರೆ ಮಾಡಿ ವಿಚಾರ ತಿಳಿಸಿದರು ಎಂದು ಪೋಲೀಸರಲ್ಲಿ ಹೇಳಿಕೆ ನೀಡಿರುವುದಿಲ್ಲ. ನಾನು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿದಾಗ ಅಲ್ಲಿ ಯಾರು ಇರಲಿಲ್ಲ. ನಾನು ಬೇಟಿ ನೀಡಿದಾಗ ಬೆಳಿಗ್ಗೆ 8.00 ಗಂಟೆಯಾಗಿತ್ತು. ನಾನು ಮೃತದೇಹ ನೋಡಿದಾಗ 8.10 ಗಂಟೆಯಾಗಿತ್ತು. ಅಂದು ಪಿರ್ಯಾದಿ ರಂಗಮ್ಮ ಊರಿನಲ್ಲಿರಲಿಲ್ಲ. ಅವಳು ಅಂದು ಅರಸೀಕೆರೆಯ ಹತ್ತಿರದ ಕೋಡಿಹಳ್ಳಿಯಲ್ಲಿದ್ದಳು.

12. ಕೃತ್ಯ ನಡೆದ ಸ್ಥಳದಿಂದ ಕೋಡಿಹಳ್ಳಿ 70 ಕಿಮೀ ದೂರದಲ್ಲಿದೆ. ಚಾಸಾ.1 ರವರು ಖಾಸಗಿ ವಾಹನದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಬಂದರು. ಚಾಸಾ.1 ರವರು ಸಿದ್ದರಹಳ್ಳಿಯವರೆಗೆ ಕಾರಿನಲ್ಲಿ ಬಂದು ಅಲ್ಲಿಂದ ಸಗಣಿಬಸವನಹಳ್ಳಿಗೆ ಬೈಕಿನಲ್ಲಿ ಬಂದರು. ಯಾರು ಬೈಕಿನಲ್ಲಿ ಚಾಸಾ.1 ರವರನ್ನು ಕರೆತಂದರು ಎಂದು ಹೇಳ ಲಾಗುವುದಿಲ್ಲ. ಚಾಸಾ.1 ರವರು ಬಂದಾಗ ಬೆಳಿಗ್ಗೆ 9.20 ಗಂಟೆಯಾಗಿತ್ತು. ಚಾಸಾ.1 ರವರು ಯಾರ ಮಾರ್ಗದಲ್ಲಿ ಬಂದಳು ಎಂದು ನನಗೆ ಗೊತ್ತಿಲ್ಲ.

13. ದೂರು ಬರೆದ ಸುರೇಶ ನಮ್ಮೂರಿನವನು. ನಾನು ಕೃತ್ಯ ನಡೆದ ಸ್ಥಳ ತಲುಪಿದ ಸುಮಾರು 15 ನಿಮಿಷದ ನಂತರ ಸುರೇಶ ಬಂದಿದ್ದ. ಸಖರಾಯಪಟ್ಟಣ ಠಾಣೆಯಲ್ಲಿ ಡಿಸೆಂಬರ್ 2022 ರಂದು ಮೃತ ಭಾರತಿ ಕಾಣೆಯಾಗಿದ್ದಾರೆ ಎಂದು ದೂರು ಸಲ್ಲಿಸಿದ್ದೆವು. ಅವಳು ಯಾರ ಜೊತೆ ಹೋಗಿದ್ದಾಳೆ ಎಂದು ಆ ದೂರಿನಲ್ಲಿ ನಮೂದಿಸಿರಲಿಲ್ಲ. ಪೋಲೀಸರು ಭಾರತಿ ಹಾಗೂ 2 ನೇ ಆರೋಪಿಯನ್ನು ಕರೆತಂದಾಗ ಭಾರತಿಗೆ 18 ವರ್ಷ ಆಗಿರಲಿಲ್ಲ ಎಂದರೆ ಸರಿಯಲ್ಲ. ಎರಡನೇ ಬಾರಿ ಭಾರತಿ ಮನೆ ಬಿಟ್ಟು ಹೋದಾಗ ಪೋಲೀಸರಲ್ಲಿ ದೂರು ಸಲ್ಲಿಸಿರಲಿಲ್ಲ. ಎರಡನೇ

ಬಾರಿ ಭಾರತಿ ಮನೆ ಬಿಟ್ಟು ಹೋದಾಗ ಏಕೆ ದೂರು ಸಲ್ಲಿಸಿಲ್ಲ ಎಂದು ನನ್ನ ಹೇಳಿಕೆಯಲ್ಲಿ ನುಡಿದಿಲ್ಲ. 2 ನೇ ಆರೋಪಿ ಹಾಗೂ ಭಾರತಿ ಮದುವೆಗೆ ನಾನು ಹೋಗಿರಲಿಲ್ಲ. 2 ನೇ ಆರೋಪಿ ಹಾಗೂ ಭಾರತಿ ಸಂಸಾರ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಯಾರೋ ಕರೆ ಮಾಡಿದಾಗ ನನಗೆ ಭಾರತಿ ಕೊಲೆಯಾದ ವಿಚಾರ ಗೊತ್ತಾಯಿತು.

14. ಭಾರತಿ ಕೊಲೆಯಾದ ಹಿಂದಿನ ದಿನ ಸಗಣಿಬಸವನ ಹಳ್ಳಿಯಲ್ಲಿ ಅಂತರಗಟ್ಟಮ್ಮ ದೇವಸ್ಥಾನದ ತಿಂಗಳ ಪೂಜೆ ಇತ್ತು ಎಂದರೆ ನಿಜ. ಅಂತರಗಟ್ಟಮ್ಮ ದೇವಸ್ಥಾನದ ತಿಂಗಳ ಪೂಜೆಯಲ್ಲಿ ಪ್ರತಿ ಮನೆಯಲ್ಲಿ ಪ್ರಾಣಿ ಬಲಿಕೊಡುವ ಪದ್ಧತಿ ಇದೆ. ಅಂದು ಪ್ರತಿಯೊಂದು ಮನೆಯಲ್ಲಿ ಪ್ರಾಣಿ ಬಲಿ ಕೊಟ್ಟು ಮಾಂಸದ ಅಡಿಗೆ ಮಾಡಿದ್ದರು, ನೆಂಟರಿಷ್ಟರು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

15. ಅಂದು ರಾತ್ರಿ ವಿದ್ಯುತ್ ಸಂಪರ್ಕ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂದು ರಾತ್ರಿ ಭಾರಿ ಮಳೆ ಬಂದಿತ್ತು ಎಂದರೆ ನಿಜ. ಮೃತ ಭಾರತಿ ಹೇಗೆ ಕೊಲೆಯಾದಳು ಎಂದು ನನಗೆ ಖುದ್ದು ಮಾಹಿತಿ ಇಲ್ಲ. ಮೃತ ಭಾರತಿ 1 ಮತ್ತು 2 ನೇ ಆರೋಪಿತರು ಅವಳ ಮಕ್ಕಳೊಂದಿಗೆ ಜೊತೆಯಾಗಿ ವಾಸವಿರುವುದನ್ನು ನಾನು ನೋಡಿರುವುದಿಲ್ಲ.

16. 1 ನೇ ಆರೋಪಿ ನಾವು ಠಾಣೆಗೆ ಹೋದಾಗ ಠಾಣೆಯಲ್ಲಿ ರುವುದನ್ನು ನಾನು, ಚಾಸಾ.1, ಸುರೇಶ ಮತ್ತು ಚಾಸಾ.1 ರವರ ಸಹೋದರ ನೋಡಿದ್ದೇವು. 1 ನೇ ಆರೋಪಿಯನ್ನು ಪೊಲೀಸತರು ನಮ್ಮ ಮುಂದೆ ವಿಚಾರಿಸಿರುವುದಿಲ್ಲ. ನಾನು ಠಾಣೆಗೆ ಬೇಟಿ ನೀಡಿದಾಗ ಬೆಳಿಗ್ಗೆ 10.15 ಗಂಟೆಯಾಗಿತ್ತು. ಸುರೇಶ ರಂಗಮ್ಮ ಹೇಳಿದಂತೆ ರಂಗಮ್ಮನ ಮನೆಯ ಎದುರಿನ ರಸ್ತೆಯಲ್ಲಿ ದೂರು

ಬರೆದ. ದೂರು ಬರೆದಾಗ ಬೆಳಿಗ್ಗೆ 9.00 ರಿಂದ 9.45 ಗಂಟೆ ಆಗಿತ್ತು. ನಾವು ಬೈಕಿನಲ್ಲಿ ಠಾಣೆಗೆ ಹೋದೆವು. ಚಾಸಾ.1 ನನ್ನ ಬೈಕಿನಲ್ಲಿ ಠಾಣೆಗೆ ಬಂದರು. ನಾವು 15 ನಿಮಿಷದಲ್ಲಿ ಠಾಣೆ ತಲುಪಿದೆವು. ಸುರೇಶ ಚಾಸಾ.1 ರವರ ತಮ್ಮನ ಬೈಕಿನಲ್ಲಿ ಠಾಣೆಗೆ ಬಂದ. ಸುರೇಶ ಅಂದು ಸಖರಾಯಪಟ್ಟಣದಿಂದ ನಮ್ಮ ಜೊತೆ ಬಂದಿದ್ದ.

17. ಚಾಸಾ.1 ಮತ್ತು ನಾವು ವಿಶ್ವಾಸದಿಂದ್ದೇವೆ. ಮೃತಳ ಶವ ಸಿಕ್ಕಿರುವುದು 1 ಮತ್ತು 2 ನೇ ಆರೋಪಿತರ ವಾಸದ ಮನೆಯ ಹಿಂಭಾಗದಲ್ಲಾಗಿತ್ತು. ಮೃತದೇಹ ಸಿಕ್ಕಿದ ಜಾಗದ ಸರ್ವೆ ನಂಬರು ಗೊತ್ತಿಲ್ಲ. ಆ ಜಾಗದ ದಾಖಲೆ ನೋಡಿಲ್ಲ. ಶಾಲೆ ಬಿಟ್ಟಾಗಿನಿಂದಲೂ ಭಾರತಿ ಚಾಸಾ.1 ರವರ ತವರು ಮನೆಯಲ್ಲಿ ವಾಸವಿದ್ದಳು. ಆರೋಪಿತರ ಮನೆಯ ಹಿಂದೆ ಶವ ಸಿಕ್ಕಿದ ಕಾರಣಕ್ಕೆ ಆರೋಪಿತರ ವಿರುದ್ದ ಸುಳ್ಳು ಆಪಾದನೆ ಹೊರಿಸಿ, ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಪೋಲೀಸರು ಅಣತಿಯಂತೆ ನಿಪಿ.3 ರಿಂದ 9 ರ ಭಾವಚಿತ್ರಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಭಾರತಿಯ ಮರಣಕ್ಕೂ ಮತ್ತು ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ದೂರು ಸಲ್ಲಿಸಿದ ನಂತರ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದಾರೆ. ಬೆಳಿಗ್ಗೆ 10.00 ಗಂಟೆಯ ಒಳಗಡೆ ಪೋಲೀಸರು ಸ್ಥಳಕ್ಕೆ ಬಂದಿರಲಿಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ